**ದಿನಾಂಕಃ 26-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ** ಪ್ರತಿವಾದಿ ಪರ ಶ್ರೀ ಟಿ ಆರ್ ಎಸ್ **ವಕೀಲರಿಂದ**

ಪಾರೇಗೌಡರವರಿಗೆ ಹೊನ್ನೆಗೌಡ, ಬೋರೆಗೌಡ ಮತ್ತು ರಾಮೆಗೌಡ ಎಂದು ಮೂರು ಜನ ಮಕ್ಕಳಿರುತ್ತಾರೆ. ಬೋರೆಗೌಡರವರ ನಾಗಮಂಗಲ ತಾಲ್ಲೂಕು ಸಂಕನಹಳ್ಳಿ ಗ್ರಾಮದಲ್ಲಿ ವಾಸವಾಗಿರುತ್ತಾರೆ. ರಾಮೇಗೌಡ ಹಾಗೂ ಹೊನ್ನೆಗೌಡ ತೀರಿ ಹೋಗಿರುತ್ತಾರೆ. ಈ ದಾವೆಯನ್ನು ನಮ್ಮ ಜಾಗವನ್ನು ಪ್ರತಿವಾದಿಗಳು ಒತ್ತುವರಿ ಮಾಡಿದ್ದು, ಅದನ್ನು ಬಿಡಿಸಿಕೊಳ್ಳಲು ಹೂಡಿರುತ್ತೇವೆ. ಪ್ರತಿವಾದಿಗಳು ನಮ್ಮ ಜಾಗ 10.8 ಗುಂಟೆ ಒತ್ತುವರಿ ಮಾಡಿದ್ದು, ಅದರಲ್ಲಿ ಯಾವುದೇ ಬೆಳೆ ಬೆಳೆದಿರುವುದಿಲ್ಲ. ಪ್ರತಿವಾದಿಗಳು ನಮ್ಮ ಜಾಗವನ್ನು 10-15 ವರ್ಷಗಳಿಂದ ಏನು ಮಾಡದೇ ಹಾಗೆ ಬಿಟ್ಟಿರುತ್ತಾರೆ. ಪ್ರತಿವಾದಿಗಳಿಂದ ನಾವು ದಾವ ಜಮೀನು ಖರೀದಿ ಮಾಡಿದ್ದು, ಆಗಿನಿಂದಲೂ ಪ್ರತಿವಾದಿಗಳು ಒತ್ತುವರಿ ಮಾಡಿದ ಜಾಗದಲ್ಲಿ ಸ್ವಾಧೀನಲ್ಲಿರುತ್ತಾರೆ. 1973 ನೇ ಇಸವಿಯಲ್ಲಿ ನನ್ನ ಅಜ್ಜ ಪ್ರತಿವಾದಿಗಳಿಂದ 2 ಎಕರೆದಾವ ಜಮೀನ್ನು ಕ್ರಯಕ್ಕೆ ಪಡೆದಿದ್ದು, ಅದರಲ್ಲಿ 10.08 ಗುಂಟೆ ಜಮೀನನ್ನು ಪ್ರತಿವಾದಿಗಳು ಒತ್ತುವರಿ ಮಾಡಿರುತ್ತಾರೆ.

ಪ್ರತಿವಾದಿಗಳು ಆಗಿನಿಂದಲೂ ಒತ್ತುವರಿ ಮಾಡಿದ ಜಾಗವನ್ನು ನಮಗೆ ಬಿಟ್ಟುಕೊಟ್ಟಿರುವುದಿಲ್ಲ. ದಾವ ಸ್ವತ್ತು ಸರ್ವೆ ನಂ.5 ನ್ನು ಪೋಡು ಮಾಡಿ ಸರ್ವೆ ನಂ.5/1 ಮತ್ತು 5/2 ಎಂದು ಪೋಡಾಗಿರುತ್ತದೆ. ನಾವು ದಾವ ಜಮೀನಿನನ್ನು ಖರೀದಿ ಮಾಡಿದ ಸಮಯದಲ್ಲೇ ಜಮೀನು ಪೋಡಾಗಿರುತ್ತದೆ. ಸರ್ವೆ ನಂ.5 ರ ಪೂರ್ವ ಭಾಗಕ್ಕೆ ಸೋಮಣ್ಣ ಬಿನ್ ಶಿವರಾಮಪ್ಪನವರ ಜಮೀನು ಇರುತ್ತದೆ. ಪಶ್ಚಿಮಕ್ಕೆ ಹಾಪ್ಸಬ್ ಅಹಮ್ಮದ್ ರವರ ಜಮೀನು ಇರುತ್ತದೆ. ಉತ್ತರಕ್ಕೆ ಜಯಬಾಯಿ ಮತ್ತು ರುದ್ರುನಾಯ್ಕರವರ ಜಮೀನು, ದಕ್ಷಿಣಕ್ಕೆ ಗಂಗನಾಯ್ಕ ಮತ್ತು ರವಿನಾಯ್ಕರವರ ಜಮೀನು ಇರುತ್ತದೆ. ಪೂರ್ವ ಭಾಗದಲ್ಲಿ ರಂಗಪ್ಪ ಎನ್ನುವವರು ಯಾರು ಇರುವುದಿಲ್ಲ. ನಾವು ನಮ್ಮ ದಾವ ಜಮೀನಿನ 5/1 ರಲ್ಲಿ

ಅಡಿಕೆ ಬೆಳೆದಿರುತ್ತೇವೆ. ಅಡಿಕೆ 6 ವರ್ಷದ ಗಿಡಗಳಾಗಿರುತ್ತವೆ. ನಮ್ಮ ಜಮೀನಿನ ಉತ್ತರ ಭಾಗಕ್ಕೆ ಪ್ರತಿವಾದಿಗಳ ಜಮೀನು 2 ಅಡಿ ಎತ್ತರ ಇರುತ್ತದೆ. ನಾವು ತೋಟ ಮಾಡುವ ಮುಂಚೆ ಭತ್ತ ಬೆಳೆಯುತ್ತಿದ್ದೆವು. 5/2 ಪ್ರತಿವಾದಿಗಳ ಜಮೀನು ಆಗಿದ್ದು, ಅವರು ಸಹ ಅಡಿಕೆ ಬೆಳೆದಿರುತ್ತಾರೆ. ಅವರ ಗಿಡಗಳು 15 ವರ್ಷಗಳ ಗಿಡಗಳಾಗಿರುತ್ತದೆ. ಪ್ರತಿವಾದಿಗಳ ಕುಟುಂಬದಲ್ಲಿ ವಿಭಾಗ ಆಗಿರುವುದಿಲ್ಲ. ಪ್ರತಿವಾದಿಗಳ ಕುಟುಂಬದಿಂದಲೇ ನಮ್ಮ ಜಾಗ ಒತ್ತುವರಿ ಆಗಿದ್ದು, ಅದನ್ನು ನಾವು ಕೇಳುತ್ತಿದ್ದೇವೆ. 2014 ನೇ ಇಸವಿಯಲ್ಲಿ ಸರ್ವೆ ನಂ.5 ಪಕ್ಕಾ ಪೋಡಿ ಮಾಡಿ ಸರ್ವೆಯರ್ ಬಂದು ಅಳತೆ ಮಾಡಿರುತ್ತಾರೆಂದರೆ ಸರಿ. ಆ ದಾಖಲಾತಿಗಳನ್ನು ನಾನು ನೋಡಿರುತ್ತೇನೆ. ದಿ: 25-06-2014 ರಂದು ಆದ ಸರ್ವೆಯಲ್ಲಿ ಯಾವುದೇ ಒತ್ತುವರಿ ಆಗಿರುವುದಿಲ್ಲ ಎಂದು ತಿಳಿಸಿರುತ್ತಾರೆಂದರೆ ಸಾಕ್ಷಿ ಸುಳ್ಳು ಎಂದು ನುಡಿದಿರುತ್ತಾರೆ. ದಾವ ಆಸ್ತಿಯಲ್ಲಿ ನಮ್ಮ ಕುಟುಂಬದಲ್ಲಿರುವ ಎಲ್ಲರಿಗೂ ಸಮ ಪಾಲು ಇದೆ ಎಂದರೆ ಸರಿ.

ನಿಮ್ಮ ಚಿಕ್ಕಪ್ಪ ದೊಡ್ಡಪ್ಪನವರು ಒತ್ತುವರಿ ಬಗ್ಗೆ ಯಾವುದೇ ಅರ್ಜಿ ಹಾಕಿಲ್ಲ ಎಂದರೆ ಸಾಕ್ಷಿ ಅವರು ನಮಗೆ ಬರೆದುಕೊಟ್ಟಿರುತ್ತಾರೆ, ಅವರಿಗೆ ಯಾವುದೇ ಅಭ್ಯಂತರ ಇಲ್ಲ ಎಂದು ನುಡಿದಿರುತ್ತಾರೆ. ನನ್ನ ಚಿಕ್ಕಪ್ಪ ದೊಡ್ಡಪ್ಪನವರು ಮೌಖಿಕವಾಗಿ ಒಪ್ಪಿಗೆ ನೀಡಿರುತ್ತಾರೆ, ಯಾವುದೇ ಬರವಣಿಗೆ ಮಾಡಿಕೊಂಡಿರುವುದಿಲ್ಲ. ಸರ್ವೆ ನಂ.5 ಜಮೀನಿನ ಸುತ್ತಲೂ ಹಿಡುವಳಿ ಜಮೀನು ಇದೆ ಎಂದರೆ ಸರಿ. ಪ್ರತಿವಾದಿಗಳು ಒತ್ತುವರಿ ಮಾಡಿರುವ ಬಗ್ಗೆ ಅದನ್ನು ಬಿಡಿಸಿಕೊಡಿ ಎಂದುಯಾವುದೇ ನೋಟೀಸು ನೀಡಿರುವುದಿಲ್ಲ ಎಂದರೆ ಸಾಕ್ಷಿ ನೀಡಿರುತ್ತೇವೆ ಎಂದು ನುಡಿದಿರುತ್ತಾರೆ. ಪ್ರತಿವಾದಿಗಳು 12 ವರ್ಷಕ್ಕಿಂತ ಹೆಚ್ಚು ವರ್ಷ 10-08 ಗುಂಟೆಯಲ್ಲಿ ಸ್ವಾಧೀನದಲ್ಲಿದ್ದು, ಆಗನಿಂದಲು ಸಹ ನೀವು ಅವರಿಂದ

ಬಿಡಿಸಿಕೊಂಡಿರುವುದಿಲ್ಲ ಎಂದರೆ ಸಾಕ್ಷಿ ನಾವು ಅಳತೆ ಮಾಡಿಸಿದ ನಂತರ ಬಿಡಿಸಿಕೊಳ್ಳಬೇಕೆಂದು ಅಳತೆ ಕಾರ್ಯ ಮಾಡಿಸಿರುತ್ತೇವೆ.

ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಕೇ. ಸ. ಇ. ಎ. ಒ.

Sd/-

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**